

# ಸುಂದರಿಯ ಸ್ವಯಂವರ

■ ಲಲಿತಾ ಕೆ. ಹೊಸಪ್ಯಾಟಿ

ನಿಸಗು ಎಂಬ ಕಾಡು. ಅಲ್ಲಿ ಕೋತಿ, ಹಸು, ಹುಲಿ, ಜಿಂಕೆ, ಕರಡಿ, ಕಡಮೆ, ಕಾಡೆಮ್ಮೆ, ಮೊಲ, ಪಾರಿವಾಳ, ಗಿಳಿ, ಗೊರವಂಕ ಎಲ್ಲ ಒಟ್ಟಾಗಿ ಜೀವಿಸಿದ್ದವು. ಆ ಕಾಡಿನಲ್ಲಿರುವ ವಿಶೇಷವೆಂದರೆ ನರರಂತೆ ಮಾತನಾಡುವ ಕೋತಿಗಳಿದ್ದವು.

ಅದರಲ್ಲಿ ಸುಂದರಿ ಎಂಬ ಕೋತಿ ತುಂಬ ಸುಂದರವಾಗಿತ್ತು. ಅದರ ಥಳುಕು–ಬಳುಕು ವಯ್ಯಾರ, ಕೂದಲು ನಗು, ನಡಿಗೆ ಎಲ್ಲವೂ ಮನಸೆಳೆಯುತ್ತಿತ್ತು. ಹೀಗಾಗಿ ಆ ಸುಂದರಿ ಕೋತಿಯನ್ನು ಮದುವೆಯಾಗಲು ತಾ ಮುಂದು ನೀ ಮುಂದು ಎಂದು ಗಂಡು ಕೋತಿಗಳು ಕಾದಿದ್ದವು. ಒಂದು ದಿನ ಎಲ್ಲ ಕೋತಿಗಳಲ್ಲಿ ಯಾವುದನ್ನು ಮದುವೆಯಾಗುವುದು ಎಂದು ತಿಳಿಯದೇ ಒಂದು ಸ್ವಯಂವರವನ್ನು ಸುಂದರಿ ಕೋತಿ ಏರ್ಪಾಡು ಮಾಡಿತು. ಆ ಸ್ವಯಂವರದ ಒಂದು ಕರಾರು ಯಾರು ಸುಂದರಿ ಕೋತಿಗೆ ಇಷ್ಟವಾಗುವ ಉಡುಗೊರೆ ಕೊಡುತ್ತಾರೋ ಆ ಕೋತಿಯನ್ನೇ ಮದುವೆಯಾಗುವುದಾಗಿತ್ತು.

ಸರದಿಯಲ್ಲಿ ನಿಂತ ಕೋತಿಗಳು ಬೆಲೆಬಾಳುವ ಮುತ್ತಿನಸರ, ಬಂಗಾರದ ಬಳೆ , ಬಾಳೆಹಣ್ಣಿನ ಗೊನೆ, ಜರಿ ಪೀತಾಂಬರ, ಸ್ಕರ್ಟ್, ಮಿಡಿ, ಶೂ, ಬೈತಲೆ ಮಣಿ , ಜೇನಿನ ಹುಟ್ಟು , ಬೋರೆ ಹಣ್ಣು, ಎಳೆ ನೀರು, ತೂಗುವ ಜೋಕಾಲಿ, ಕಾಲಿನ ಗೆಜ್ಜೆ, ಕಣ್ಣಿನ ಕಾಡಿಗೆ, ತುಟಿ ಚೂರ್ಣ (ಲಿಪ್‌ಸ್ಟಿಕ್) ಹೀಗೆ ತರ ತರದ ವಸ್ತುಗಳೊಂದಿಗೆ ನಿಂತವು.

ಸುಂದರಿಗೆ ಆಪ್ತ ಸಹಾಯಕ (ಪಿಎ) ಕೋತಿಯೊಂದಿತ್ತು. ಅದರ ಹೆಸರು ಟೀಕು. ಒಮ್ಮೆ ಗಿಡವೇರಿದ ಪಿಎ ಧ್ವನಿವರ್ಧಕದಿಂದ ‘ಯುವ ಮಿತ್ರರೆ! ವಿಷಾದದ ಸಂಗತಿ. ಈಗ ತಾನೆ ಆಲದ ಮರದ ಮೇಲೆ ಇಟ್ಟಿದ್ದ ಕಾಡಿಗೆಡಬ್ಬಿ ತೆಗೆದುಕೊಳ್ಳಲು ಹೋದ ನಮ್ಮ ಸುಂದರಿ ಮೇಡಂ ಮಲ್ಲಿಗೆ ಬಳ್ಳಿಗೆ ಕಾಲು ಸಿಕ್ಕಿಸಿಕೊಂಡು ಬಿದ್ದಿದ್ದರಿಂದ ಕಾಲು ಉಳಿಕಿಸಿಕೊಂಡಿದ್ದಾರೆ. ತಕ್ಷಣ ವೈದ್ಯರು